ರೂ. 49.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬೀದರ್‌ರವರಿಗೆ ಬಿಡುಗಡೆ ಮಾಡಿರುತ್ತದೆ.

ಬೀದರ್ ಜಿಲ್ಲೆಯ ಕಾರಂಜಾ ಜಲಾಶಯದ ಬಳಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರದ ಮಂತ್ರಾಲಯದಿಂದ ರೂ. 157.04 ಲಕ್ಷಗಳಿಗೆ ಮಂಜೂರಾತಿ ದೊರಕಿದೆ.

ಉ) ಈ ಹಣದಿಂದ ಯಾವ ಯಾವ ಸ್ಥಳಗಳನ್ನು ಅಭಿವೃದ್ಧಿಪಡಿಸಲಾಗುವುದು?

ಜಿಲ್ಲಾ ಆಡಳಿತವು ಸದರಿ ಅನುದಾನದಿಂದ ಬೀದರ್ ನಗರದ ಸ್ಮಾರಕಗಳ ಅಭಿವೃದ್ಧಿ, ರಸ್ತೆಗಳ ಅಗಲೀಕರಣ, ದುರಸ್ತಿಗಳು, ಮೂಲಭೂತ ಸೌಕರ್ಯ ಅಭಿವೃದ್ಧಿ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಂಡಿರುತ್ತದೆ.

ಕಾರಂಜಾ ಡ್ಯಾಂ ಪ್ರದೇಶದಲ್ಲಿ ನಿವೇಶನ ದೊರೆತ ನಂತರ ಲ್ಯಾಂಡ್ ಸ್ಕೇಪಿಂಗ್, ಮಕ್ಕಳ ಉದ್ಯಾನವನ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

<u>ಕರ್ನಾಟಕ ವಿಧಾನಸಭೆ</u>

217 ಶ್ರೀ ಈಶ್ವರ್ ಭೀಮಣ್ಣಖಂಡ್ರೆ

ಮಾನ್ಯ ಸಾರಿಗೆ ಸಚಿವರು

ಅ) ರಾಜ್ಯದಲ್ಲಿರುವ ಸಾರಿಗೆ ಸಂಸ್ಥೆಗಳ ಸಂಖ್ಯೆ ಎಷ್ಟು, ಹಾಗೂ ಈ ಸಂಸ್ಥೆಗಳ ವ್ಯಾಪ್ತಿಗೆ ಬರುವ ಜಿಲ್ಲೆಗಳೆಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು);

4 ಸಾರಿಗೆ ಸಂಸ್ಥೆಗಳು.

<u>1.KSRTC:</u>

17 ಜಿಲ್ಲೆಗಳು: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಚಿಕ್ಕಮಗಳೂರು, ಚಿತ್ರದುರ್ಗ ದಾವಣಗೆರೆ ಶಿವಮೊಗ್ಗ, ಉಡುಪಿ, ದಕ್ಷಿಣಕನ್ನಡ, ಹಾಗೂ ಕೊಡಗು

<u>2.BMTC:</u>

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ BMRDA ವ್ಯಾಪ್ತಿಯಲ್ಲಿ ಕಾರ್ಯಾಚರಣೆ ಮಾಡುತ್ತಿದೆ.

<u>3.NWKRTC:</u>

7 ಜಿಲ್ಲೆಗಳು: ಧಾರವಾಡ, ಬೆಳಗಾವಿ, ಬಿಜಾಪುರ, ಉತ್ತರಕನ್ನಡ ಬಾಗಲಕೋಟೆ, ಗದಗ ಮತ್ತು ಹಾವೇರಿ

<u>4.NEKRTC:</u>

6 ಜಿಲ್ಲೆಗಳು: ಗುಲ್ಬರ್ಗಾ, ಯಾದಗೀರ, ಬೀದರ್, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ.

ಆ) ಈ ಸಾರಿಗೆ ಸಂಸ್ಥೆಗಳ ಪೈಕಿ ಕಳೆದ 3 ವರ್ಷಗಳಿಂದ ಯಾವ ಸಂಸ್ಥೆಗಳು ನಷ್ಟದಲ್ಲಿವೆ ಹಾಗೂ ಯಾವ ಸಂಸ್ಥೆಗಳು ಲಾಭದಲ್ಲಿವೆ (ವಿವರ ನೀಡುವುದು);

KSRTC: ಕಳೆದ 3 ವರ್ಷಗಳಿಂದ ಸತತವಾಗಿ ಲಭ ಗಳಿಸಿದೆ,

ವರ್ಷ	ಮೊತ್ತ (ಕೋಟಿ ರೂ.ಗಳಲ್ಲಿ)
2006–07	33.90
2007–08	40.54
2008–09	57.71(ತಾತ್ಕಾಲಿಕ)

BMTC: ಕಳೆದ 3 ವರ್ಷಗಳಿಂದ ಸತತವಾಗಿ ಲಾಭ ಗಳಿಸಿದೆ.

ವರ್ಷ	ಮೊತ್ತ (ಕೋಟಿ ರೂ.ಗಳಲ್ಲಿ)
2006–07	224.32
2007–08	140.23
2008–09	55.18

NWKRTC: ಕಳೆದ 3 ವರ್ಷಗಳಿಂದ ಲಾಭ ನಷ್ಟದ ವಿವರ:

ವರ್ಷ	ಲಾಭ	ನಷ್ಟ
2006–07	12.67	---
2007–08	---	67.06
2008–09	---	68.56

NEKRTC: ಕಳೆದ 3 ವರ್ಷಗಳ ನಷ್ಟದ ವಿವರ:

ವರ್ಷ	ನಷ್ಟ(ರೂ.ಕೋಟಿಗಳಲ್ಲಿ)
2006–07	29.53
2007–08	15.96
2008–09	28.65

ಇ) ಕೆಲವು ಸಂಸ್ಥೆಗಳು ನಷ್ಟ ಅನುಭವಿಸುತ್ತಿರಲು ಕಾರಣಗಳೇನು;

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:

ಡೀಸಲ್ ಮತ್ತು ಇನ್ನಿತರ ಸಾಮಾಗ್ರಿಗಳ ದರಗಳಲ್ಲಿ ಹೆಚ್ಚಳ ಹಾಗೂ ಕಾಲಕಾಲಕ್ಕೆ ನೀಡಲಾಗುತ್ತಿರುವ ತುಟ್ಟಿಭತ್ಯೆ ಮತ್ತು ವೇತನ ಪರಿಷ್ಕರಣೆಯಿಂದಾಗಿ ದಿನನಿತ್ಯದ ವೆಚ್ಚಗಳಲ್ಲಿ ಹೆಚ್ಚಳದಿಂದಾಗಿ ನಷ್ಟ ಅನುಭವಿಸುತ್ತಿವೆ. ಅಲ್ಲದೆ ಖಾಸಗಿ ವಾಹನಗಳ ಕಾರ್ಯಾಚರಣೆಯಿಂದಾಗಿ ಸಂಸ್ಥೆಗೆ ಆದಾಯದಲ್ಲಿ ಕೊರತೆಯಾಗುತ್ತಿದೆ.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:

ಸಂಸ್ಥೆಯು ಪ್ರಾರಂಭದಿಂದ ಇಲ್ಲಿಯವರೆಗೆ ನಷ್ಟವನ್ನು ಅನುಭವಿಸಿದೆ. ಸಂಸ್ಥೆಯಲ್ಲಿ ಹೆಚ್ಚಿನ ಬಾಡಿಗೆ ಆಧಾರದ ವಾಹನಗಳು ಹಾಗೂ ಹಳೇಯ ವಾಹನಗಳಿದ್ದ ಕಾರಣ ಸಂಸ್ಥೆಗೆ ನಷ್ಟ ಹೆಚ್ಚಾಗಲು ಕಾರಣವಾಗಿದೆ. ನೌಕರರಿಗೆ

ಪಾವತಿಸಿದ್ದ ತುಟ್ಟಿಭತ್ಯೆ ದಿ:1.4.2006ರ ಪೂರ್ವಾನ್ವಯವಾಗಿ ಜಾರಿಗೊಳಿಸಿರುವುದರಿಂದ ಹಾಗೂ ಆಯವ್ಯಯದಲ್ಲಿ ವಿದ್ಯಾರ್ಥಿ ಹಾಗೂ ಇತರೆ ಬಸ್‌ಪಾಸ್ ವಿತರಣೆಯಲ್ಲಿ ಸರ್ಕಾರದಿಂದ ಘೋಷಿಸಿದ ಮರುಪಾವತಿ ಹಣಕ್ಕಿಂತ ರೂ.13.00 ಕೋಟಿ ಕಡಿಮೆ ಮರುಪಾವತಿಯನ್ನು ಸಂಸ್ಥೆಗೆ ನೀಡಿದೆ. ಇಂಧನ ದರದಲ್ಲಾದ ಹೆಚ್ಚಳದಿಂದ ಆಗಸ್ಟ್-2008ರ ವರೆಗೆ ರೂ.9.80 ಕೋಟಿ ಹೆಚ್ಚಿನ ಹೊರೆಯಾಗಿದೆ.

ಈ) ಯಾವ ಯಾವ ಸಂಸ್ಥೆಗಳಲ್ಲಿ ಭ್ರಷ್ಟಾಚಾರದ ಪ್ರಕರಣಗಳು ಪತ್ತೆಯಾಗಿವೆ;

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಭ್ರಷ್ಟಚಾರದ ಪ್ರಕರಣಗಳು ಪತ್ತೆಯಾಗಿವೆ.

ಉ) ನಷ್ಟದಲ್ಲಿರುವ ಸಾರಿಗೆ ಸಂಸ್ಥೆಗಳನ್ನು ಪುನಶ್ಚೇತನಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು;

<u>ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:</u>

2008-09ರಲ್ಲಿ ರೂ. 40.00ಕೋಟಿಗಳನ್ನು ಹೊಸ ಬಸ್ಸುಗಳ ಖರೀದಿಗಾಗಿ ನೀಡಲಾಗಿದೆ. ಹಾಗೂ 2009-10ರಲ್ಲಿ ರೂ.50.00ಕೋಟಿಗಳನ್ನು ಬಸ್ಸುಗಳ ಖರೀದಿಗಾಗಿ ಆಯವ್ಯಯದಲ್ಲಿ ಪ್ರಾವದಾನ ಮಾಡಲಾಗಿದೆ. ಮೋಟಾರು ವಾಹನ ತೆರಿಗೆಯನ್ನು ಪ್ರತಿಶತ 7.0ರಿಂದ 5.0ಗೆ ಕಡಿಮೆಗೊಳಿಸಿದೆ. ಡೀಸೆಲ್ ದರಗಳಲ್ಲಿ ಮತ್ತು ತುಟ್ಟಿಭತ್ಯೆ ಹೆಚ್ಚಾದಾಗ ಕೂಡಲೇ ಟಿಕೇಟು ದರಗಳನ್ನು ಪರಿಷ್ಕರಿಸಿ ನೀಡಲಾಗುತ್ತಿದೆ.

<u>ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:</u>

1) ಸಂಸ್ಥೆಯಲ್ಲಿ ಕಾರ್ಯಾಚರಣೆಯಲ್ಲಿದ್ದ ಬಾಡಿಗೆ ಆಧಾರದ ಎಲ್ಲಾ ವಾಹನಗಳನ್ನು ರದ್ದತಿಗೊಳಿಸಲಾಗಿದ್ದು, ಕರಾರು ಒಪ್ಪಂದ ಜಾರಿಯಲ್ಲಿದ್ದ 67 ಬಾಡಿಗೆ ಆಧಾರದ ಬಸ್ಸುಗಳು ಮಾತ್ರ ಕಾರ್ಯಾಚರಣೆಯಲ್ಲಿರುತ್ತವೆ. ಇವುಗಳನ್ನು ಕಾರಾರು ಒಪ್ಪಂದ ಮುಗಿದ ನಂತರ ಹಂತ ಹಂತವಾಗಿ ಮುಂದಿನ 3-4 ತಿಂಗಳುಗಳಲ್ಲಿ ರದ್ಧತಿಗೊಳಿಸಲಾಗುವುದು. ನಿಷ್ಕ್ರೀಯವಾದ ಹಳೆ ಬಸ್ಸು ಹಾಗೂ ಬಾಡಿಗೆ ಆಧಾರದ ಬಸ್ಸುಗಳ ಬದಲಾಗಿ ನಿಗಮದಿಂದ 07-08 ಹಾಗೂ 08-09 ರಲ್ಲಿ ಒಟ್ಟು 1280 ಹೊಸ ಬಸ್ಸುಗಳ ಸೇರ್ಪಡೆ ಮಾಡಲಾಗಿದೆ. 07-08 ಸಾಲಿನಲ್ಲಿ ಅಂತರಾಜ್ಯ ಒಪ್ಪಂದ ಮಾಡಿಕೊಂಡು ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಗೋವಾದೊಂದಿಗೆ ಒಟ್ಟು 298 ಅಂತರರಾಜ್ಯ ಮಾರ್ಗಗಳಿಗೆ ಒಪ್ಪಂದ ಮಾಡಿಕೊಂಡು ಇವುಗಳ ಪೈಕಿ ಈಗಾಗಲೇ 201 ಮಾರ್ಗಗಲ್ಲಿ ಹೊಸ ಬಸ್ಸುಗಳನ್ನು ಕಾರ್ಯಾಚರಣೆ ಪ್ರಾರಂಭಿಸಲಾಗಿದೆ. 09-10 ನೇ ಸಾಲಿನಲ್ಲಿ ಒಟ್ಟು 600 ಹೊಸದಾದ ಬಸ್ಸುಗಳನ್ನು ಸಂಸ್ಥೆಗೆ ಸೇರ್ಪಡೆ ಮಾಡಲು ಕಾರ್ಯಯೋಜನೆ ರೂಪಿಸಲಾಗಿರುತ್ತದೆ.

2) ಈ.ಟಿ.ಎಂ. ಯಂತ್ರಗಳನ್ನು ಎಲ್ಲಾ ಘಟಕಗಳಿಗೂ ನೀಡಿದ್ದು ಇದರಿಂದ ಹಣ ಸೋರಿಕೆಯನ್ನು ಗಣನೀಯವಾಗಿ ಕಡಿಮೆ ಮಾಡಲಾಗುತ್ತಿದೆ.

3) ಕೆ.ಎಂ.ಪಿ.ಎಲ್. ಹಾಗೂ ಟೈರುಗಳ ಜೀವಮಾನ ಹೆಚ್ಚಿಸಿ. ಕಾರ್ಯಾಚರಣೆ ವೆಚ್ಚವನ್ನು ಕಡಿಮೆ ಮಾಡಲಾಗುವುದು.

4) ಖಾಸಗಿ ವಾಹನಗಳ ಜೊತೆ ಪೈಪೋಟಿ ಮಾಡಲು ಪ್ರೋತ್ಸಾಹದಾಯಕ ದರಗಳನ್ನು ನೀಡಿ, ಪ್ರಯಾಣಿಕರ ಮನವೋಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

5) ಘಟಕ ಹಾಗೂ ವಿಭಾಗಗಳ ಪ್ರಗತಿಯನ್ನು ಮೇಲಿಂದ ಮೇಲೆ ಸಭೆ ನಡೆಸಿ ಪರಿಶೀಲಿಸಲಾಗುವುದು. ಅಲ್ಲದೇ ಪ್ರತಿಯೊಂದು ವಿಭಾಗಕ್ಕೆ ಇಲಾಖಾ ಮುಖ್ಯಸ್ಥರನ್ನು ಉಸ್ತುವರಿ ಅಧಿಕಾರಿಯನ್ನು ನೇಮಕ ಮಾಡಿದ್ದು, ವಿಭಾಗಗಳ ಹಾಗೂ ಉಸ್ತುವಾರಿ ಅಧಿಕಾರಿಗಳ ಕಾರ್ಯವೈಖರಿಯನ್ನು ಪದೇ ಪದೇ ಪರಿಶೀಲಿಸಲಾಗುತ್ತಿದೆ.

6) ಸಂಸ್ಥೆಯ ವ್ಯಾಪ್ತಿಯಲ್ಲಿ ಲಭ್ಯವಿರುವ ಜಮೀನಿನಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ, ವಾಣಿಜ್ಯ ಆದಾಯವನ್ನು ಹೆಚ್ಚಿಸಲು ಕ್ರಮಕೈಗೊಳ್ಳಲಾಗುತ್ತಿದೆ.

7) ಸಂಸ್ಥೆಯ ಬಸ್ ನಿಲ್ದಾಣ ಹಾಗೂ ವಾಹನಗಳ ಮೇಲೆ ಜಾಹೀರಾತುಗಳನ್ನು ಪ್ರದರ್ಶಿಸುವುದರ ಮೂಲಕ ಜಾಹೀರಾತು ಆದಾಯ ಹೆಚ್ಚಿಸಲಾಗುವುದು.

ಊ) ನಷ್ಟಕ್ಕೆ ಕಾರಣರಾದವರ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳುವುದು; ಸಂಸ್ಥೆಯ ನಿಯಮಾವಳಿಗಳಂತೆ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಋ) ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ಕಾರ್ಯವೈಖರಿಯನ್ನು ಇನ್ನಷ್ಟು ಉತ್ತುಮಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಸಂಸ್ಥೆಯ ಭೌತಿಕ ಮತ್ತು ಆರ್ಥಿಕ ಕಾರ್ಯಾಚರಣೆ ಉತ್ತಮಪಡಿಸಲು 2007–08 ನೇ ಸಾಲಿನಿಂದ ಈ ಕೆಳಗಿನ ಕ್ರಮವನ್ನು ಕೈಗೊಳ್ಳಲಾಗಿದೆ.

1) 2006–07 ನೇ ಸಾಲಿನಲ್ಲಿದ್ದ 503 ಬಾಡಿಗೆ ಆಧಾರದ ಆಧಾರದ ಖಾಸಗಿ ವಾಹನಗಳನ್ನು ಹಂತ ಹಂತವಾಗಿ ಕರಾರು ಒಪ್ಪಂದದ ಪ್ರಕಾರ ಇವುಗಳನ್ನು ರದ್ದುಗೊಳಿಸಿ ಇವುಗಳ ಸ್ಥಾನದಲ್ಲಿ ಸಂಸ್ಥೆಯ ವಾಹನಗಳನ್ನು ಕಾರ್ಯಾಚರಿಸಲಾಗುತ್ತಿದೆ. ಪ್ರಸ್ತುತ ಸಂಸ್ಥೆಯಲ್ಲಿ 67 ಬಾಡಿಗೆ ಆಧಾರದ ಖಾಸಗಿ ವಾಹನಗಳು ಇರುತ್ತವೆ. ಈ ವಾಹನಗಳನ್ನು ಸಹ ಒಪ್ಪಂದದ ಅವಧಿ ಮುಗಿದ ನಂತರ ರದ್ದುಗೊಳಿಸಲಾಗುವುದು.

2) ಕಳೆದ 2 ವರ್ಷಗಳಲ್ಲಿ 7.50 ಲಕ್ಷ ಕಿ.ಮೀ. ಗಳು ಕ್ರಮಿಸಿದ 467 ಹಳೆಯ ವಾಹನಗಳನ್ನು ನಿಷ್ಕ್ರೀಯಗೊಳಿಸಿ. ಇವುಗಳ ಸ್ಥಾನದಲ್ಲಿ ಹೊಸ ವಾಹನಗಳನ್ನು ಕಾರ್ಯಾಚರಣೆಗೆ ತರಲಾಗಿದೆ.

3) ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಗೋವಾ ರಾಜ್ಯಗಳೊಂದಿಗೆ 298–ಹೊಸ ಅನುಸೂಚಿಗಳಿಗೆ ಅಂತರಾಜ್ಯ ಒಪ್ಪಂದವನ್ನು ಮಾಡಿಕೊಂಡಿದ್ದು, ಅವುಗಳ ಪೈಕಿ 201 ಹೊಸ ಅನುಸೂಚಿಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

4) ಕಳೆದ 2 ವರ್ಷಗಳಲ್ಲಿ ಸಂಸ್ಥೆಯಲ್ಲಿ 48 ಹವಾನಿಯಂತ್ರಿತ ವಾಹನಗಳನ್ನು ಪ್ರಮುಖ ಮಾರ್ಗಗಳ ಮೇಲೆ ಕಾರ್ಯಾಚರಣೆ ಮಾಡಲಾಗುತ್ತಿದೆ.

5) ರೂ. 5.00 ಕೋಟಿ ವೆಚ್ಚದಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ಧನ ಸಹಯೋಗದಿಂದ ಪ್ರಾದೇಶಿಕ ತರಬೇತಿ ಕೇಂದ್ರವನ್ನು ಹಗರಿಬೊಮ್ಮನಹಳ್ಳಿಯಲ್ಲಿ ನಿರ್ಮಿಸಲಾಗಿದೆ. ಈ ಕೇಂದ್ರದಲ್ಲಲಿ ಎಲ್ಲಾ ವರ್ಗದ ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.

6) ಯಾದಗೀರಿನಲ್ಲಿ ರೂ. 14.00 ಕೋಟಿ ವೆಚ್ಚದಲ್ಲಿ ಪ್ರಾದೇಶಿಕ ಕಾರ್ಯಾಗಾರವನ್ನು ನಿರ್ಮಿಸಲಾಗಿದೆ. ಈ ಕಾರ್ಯಾಗಾರವು ಸದ್ಯಕ್ಕೆ ಪ್ರತಿ ವರ್ಷ 240 ಹೊಸ ವಾಹನಗಳನ್ನು ಹಾಗೂ 180 ವಾಹನಗಳನ್ನು ರಿಪೇರಿ ಮಾಡುವ ಸಾಮರ್ಥ್ಯವನ್ನು ಹೊಂದಿದೆ.

7) ಕಳೆದ ಎರಡು ವರ್ಷಗಳಲ್ಲಿ 2700 ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ. ಇದರಿಂದ ಸಂಸ್ಥೆಯು ರದ್ಧತಿಯಿಲ್ಲದೆ ಅನುಸೂಚಿಗಳನ್ನು ಸಮಯಕ್ಕೆ ಸರಿಯಾಗಿ ಕಾರ್ಯಾಚರಣೆ ಮಾಡಲು ಸಾಧ್ಯವಾಗಿದೆ.

8) ಪ್ರಯಾಣಿಕರು ತಮ್ಮ ಅಸನಗಳನ್ನು ಕಾಯ್ದಿರಿಸಲು ಅವತಾರ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ಈ.ಕ.ರ.ಸಾ. ಸಂಸ್ಥೆಯಲ್ಲಿ ಡಾ.ನಂಜುಂಡಪ್ಪನವರ್ ವರದಿ ಆಧಾರದ ಮೇಲೆ ನೀಡಿದ ಅನುದಾನದಿಂದ ಹೊಸ ಬಸ್ ನಿಲ್ದಾಣಗಳು ಹಾಗೂ ಘಟಕಗಳನ್ನು ನಿರ್ಮಿಸಲು ಹಾಗೂ ಹಳೆಯ ಬಸ್ ನಿಲ್ದಾಣ ಹಾಗೂ ಘಟಕಗಳನ್ನು ಮೇಲ್ದಾರ್ಜೆಗೆರಿಸುವ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲಾಗಿದೆ. ಇದಲ್ಲದೆ ಸುಲಭ ಶೌಚಾಲಯಗಳು ಹಾಗೂ ತಂಗುದಾಣಗಳನ್ನು ಸಹ ನಿರ್ಮಿಸಲಾಗುತ್ತಿದೆ.

ಕರ್ನಾಟಕ ವಿಧಾನಸಭೆ
13ನೇ ವಿಧಾನಸಭೆ
3ನೇ ಅಧಿವೇಶನ

218 ಶ್ರೀ ಈಶ್ವರ ಭೀಮಣ್ಣ ಖಂಡ್ರೆ(ಭಾಲ್ಕಿ)
ಮಾನ್ಯ ಲೋಕೋಪಯೋಗಿ ಸಚಿವರು

ಅ) ಬೀದರ್ ಲೋಕೋಪಯೋಗಿ ವಿಭಾಗಕ್ಕೆ ಕಳೆದ 3 ವರ್ಷಗಳಲ್ಲಿ ಪ್ರತಿ ವರ್ಷ ಹೊಸ ರಸ್ತೆಗಳ ನಿರ್ಮಾಣ, ನಿರ್ವಹಣೆ ಅಭಿವೃದ್ಧಿ ಹಾಗೂ ಮೇಲ್ದರ್ಜೆಗೇರಿಸಲು ಎಷ್ಟು ಹಣವನ್ನು ನೀಡಲಾಗಿದೆ. ಪೂರ್ಣ ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು.

ಬೀದರ್ ಲೋಕೋಪಯೋಗಿ ವಿಭಾಗಕ್ಕೆ ಕಳೆದ 3 ವರ್ಷಗಳಲ್ಲಿ ಪ್ರತಿ ವರ್ಷ ಹೊಸ ರಸ್ತೆಗಳ ನಿರ್ಮಾಣ, ನಿರ್ವಹಣೆ ಅಭಿವೃದ್ಧಿ ಹಾಗೂ